**ದಿನಾಂಕಃ 28/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 1 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಜಿ.ಜಿ ವಕೀಲರಿಂದಃ**

1. ನನ್ನ ಊರು ಭಾರತೀನಗರ. 2016 ನೇ ಸಾಲಿನಲ್ಲಿ ನಾನು ತೆಲಗಿನಕುಪ್ಪೆ ಗ್ರಾಮದಲ್ಲಿದ್ದೆ. ತೆಲಗಿನಕುಪ್ಪೆ ಗ್ರಾಮಕ್ಕೂ ಮತ್ತು ನಿಲವಾಡಿ ಗ್ರಾಮಕ್ಕೂ ಸುಮಾರು 25 ಕಿ.ಮೀ. ಅಂತರ ಎಂದರೆ ಸರಿ. ಈ ದಾವೆಯನ್ನು ಯಾವ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿಗೆ ಹೂಡಿದ್ದಾರೆಂದು ಗೊತ್ತಿಲ್ಲ. ಸಾಕ್ಷಿ ಸ್ವತಃ ನಾನು ವಾದಿಯ ತಂದೆಯ ಜಮೀನಿಗೆ ಕೆಲಸಕ್ಕೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನನಗೆ 1 ನೇ ಪ್ರತಿವಾದಿ ಗೊತ್ತಿಲ್ಲ. ವಾದಿ ಅವರ ಅಣ್ಣತಮ್ಮಂದಿರ ವಿರುದ್ಧ ದಾವೆ ಹೂಡಿದ್ದಾರೆ. ಲೇಟ್ ಕಾಡನಾಯಕ ಮತ್ತು ಸೂರಮ್ಮ ನವರ ವಂಶವೃಕ್ಷ ನನಗೆ ಗೊತ್ತಿಲ್ಲ. ಮಲ್ಲನಾಯಕರವರ ವಂಶವೃಕ್ಷ ಗೊತ್ತಿಲ್ಲ. ವಂಶವೃಕ್ಷ ಎಂದರೆ ಗೊತ್ತು. ಸಣ್ಣಪ್ಪ ನಾಯಕರಿಗೆ ಒಬ್ಬ ಗಂಡು ಮಗ, 4 ಜನ ಹೆಣ್ಣು ಮಕ್ಕಳು. ವಾದಿಯ ಸಹೋದರಿಯರ ಹೆಸರು ಸುಂದ್ರಮ್ಮ, ಪಾರ್ವತಮ್ಮ, ಪ್ರೇಮಮ್ಮ ಮತ್ತು ರತ್ನಮ್ಮ. ಅವರು ಇನ್ನೂ ಜೀವಂತ ಇದ್ದಾರೆ. ತೆಲಗಿನಕುಪ್ಪೆ ಗ್ರಾಮಕ್ಕೆ ವಾದಿಯ ತಂದೆ ಬಂದು 30-40 ವರ್ಷ ಆಗಿದೆ. ಸಣ್ಣಪ್ಪ ನವರು ಯಾವ ಜಮೀನನ್ನೂ ಸಂಪಾದನೆ ಮಾಡಿರಲಿಲ್ಲ. ವಾದಿ ಸಹ ಜಮೀನನ್ನೂ ಸಂಪಾದಿಸಿಲ್ಲ.

2. ನಿಲವಾಡಿ ಗ್ರಾಮದಲ್ಲಿರುವ ವಾದಿಯ ಸಂಬಂಧಿಕರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೆಲಸ ಮಾಡಿ ವಾಪಸ್ಸು ಬರುತ್ತಿದ್ದೆ. ನನಗೆ ಬೇರೆ ವಿಚಾರಗಳು ಗೊತ್ತಿಲ್ಲ. ಅವರ ಸಂಬಂಧಿಕರ ಬಗ್ಗೆ ನಾನು ತಿಳಿದುಕೊಂಡಿಲ್ಲ. ವಾದಿ ನಮ್ಮ ಊರಿನಲ್ಲಿ ದುಡ್ಡು ಕೊಟ್ಟು ಜಮೀನು ಕೊಂಡುಕೊಂಡಿಲ್ಲ. ನಮ್ಮ ತೆಲಗಿನಕುಪ್ಪೆ ಗ್ರಾಮದಲ್ಲಿ ಲೇಟ್ ಕಾಡನಾಯಕರಿಗೆ ಸೇರಿದ ಸುಮಾರು 18-19 ಎಕರೆ ಪಿತ್ರಾರ್ಜಿತವಾದ ಜಮೀನುಗಳಿವೆ ಎಂದು ನಾನು ಹೇಳಿ ಬರೆಸಿಲ್ಲ. ಸದರಿ ಜಮೀನುಗಳು ಲೇಟ್ ಕಾಡನಾಯಕರಿಗೆ ಪಿತ್ರಾರ್ಜಿತವಾಗಿ ಬಂದ ಜಮೀನುಗಳಾಗಿರುತ್ತವೆ ಎಂದು ಹೇಳಿ ಬರೆಸಿಲ್ಲ, ಆದರೆ ನಿಲವಾಡಿ ಗ್ರಾಮದಲ್ಲಿ ಜಮೀನುಗಳಿವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ನಮ್ಮ

ಊರಿಗೆ ಬಂದು ವ್ಯವಸಾಯ ಮಾಡುತ್ತಿದ್ದಾರೆಂದು ಬರೆಸಿಲ್ಲ. ವಾದಿ ನಿಲವಾಡಿ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಿಲ್ಲ. ವಾದಿ ನನ್ನನ್ನು ಪಂಚಾಯಿತಿಗೆ ಕರೆದಿಲ್ಲ. ನಿಲವಾಡಿ ಗ್ರಾಮದಲ್ಲಿ ವಾದಿ ಮತ್ತು ಅವರ ತಂದೆಗೆ ಯಾವುದೇ ಜಮೀನು ಇಲ್ಲ ಮತ್ತು ಸಂಬಂಧಿಕರು ಇಲ್ಲ ಎಂದರೆ ಸರಿ. ನಾನು ವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಮ್ಮ ಊರಿನಲ್ಲಿ ಜನಿಸಿದ್ದು. ವಾದಿಯೇ ನನಗೆ ಈ ರೀತಿ ಸಾಕ್ಷಿ ಹೇಳಲು  ಕರೆದುಕೊಂಡು ಬಂದ್ದಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**